

# ನೀ ಅಮೃತಧಾರೆ...

## ರುದ್ರ ರಮ್ಯ ಜಲಪಾತಗಳ ಜೋಳಿಗೆ ಪಶ್ಚಿಮಘಟ್ಟಗಳ ಸಾಲು

■ ಸಂತೋಷ ಈ. ಚಿನಗುಡಿ

ಪಶ್ಚಿಮಘಟ್ಟಗಳ ಸೆರಗು ಅಸಂಖ್ಯ ಜಲಪಾತಗಳನ್ನು ತೂಗಿದ ಜೋಳಿಗೆ. ಗಿರಿ–ಕಂದರಗಳ ರುದ್ರರಮ್ಯ ಸೌಂದರ್ಯದ ಈ ತಾಣದಲ್ಲಿ ಜಲಸುಂದರಿಯರದ್ದೇ ಆಡುಂಬೋಲ. ಬೆಳಗಾವಿಯಿಂದ 60 ಕಿ.ಮೀ ಸುತ್ತ ಯಾವ ದಿಕ್ಕಿಗೆ ಹೋದರೂ ಜಲಪಾತಗಳು ಎದುರುಗೊಳ್ಳುತ್ತವೆ. ಮಳೆಗಾಲದಲ್ಲಂತೂ ನದಿಗಳ ಒಡಲಿಂದ, ಬೆಟ್ಟ–ಗುಡ್ಡ– ಅರಣ್ಯದ ಕರುಳಿನಿಂದ ಹರಿದುಬರುವ ನೀರು ಭೋರ್ಗರೆಯುತ್ತದೆ. ಪ್ರವಾಸಿಗರನ್ನು, ಪ್ರಕೃತಿಪ್ರಿಯರನ್ನು ಚುಂಬಕದಂತೆ ಸೆಳೆಯುವ ಈ ನೀರಧಾರೆಗಳು ಭುವನ ಸ್ವರ್ಗದಂತಿವೆ.

ವಿಶ್ವಪ್ರಸಿದ್ಧ ಗೋಕಾಕ ಜಲಪಾತ, ಇದರ ಹತ್ತಿರದಲ್ಲೇ ಇರುವ ಗೊಡಚಿನಮಲ್ಕಿ ಜಲಪಾತ, ಕರ್ನಾಟಕ– ಗೋವಾಗಳ ಗಡಿರೇಖೆಯಾದ ಕ್ಷೀರಸಾಗರ (ದೂಧ್‌ಸಾಗರ), ಮಹಾರಾಷ್ಟ್ರದ ಸುಂದರಿ ಅಂಬೋಲಿ ಜಲಪಾತ, ಇದನ್ನೂ ಮೀರಿಸುವ ಕವಳೆಸಾತ್ ಪಾಯಿಂಟ್‌ಗಳನ್ನು ನೋಡದ ಕಣ್ಣುಗಳು ಏನನ್ನೋ ಕಳೆದುಕೊಂಡಂತೆಯೇ ಸರಿ.

ಕರ್ನಾಟಕ, ಮಹಾರಾಷ್ಟ್ರ, ಗೋವಾ; ಮೂರೂ ರಾಜ್ಯಗಳ ಸಂಪರ್ಕ ಕೊಂಡಿಯಾದ ಖಾನಾಪುರ ತಾಲ್ಲೂಕು ಶೇ. 70ರಷ್ಟು ಅರಣ್ಯವನ್ನೇ ಹೊಂದಿದೆ. ಒಂದೇ ತಾಲ್ಲೂಕಿನಲ್ಲಿ 10ಕ್ಕೂ ಹೆಚ್ಚು ಜಲಪಾತಗಳಿರುವುದೇ ಇದರ ವಿಶೇಷ. ಕೆಲವು ಭೀಮಘಡದ ಅಭಯಾರಣ್ಯದಲ್ಲಿ ಅವುಚಿಕೊಂಡಿದ್ದರೆ ಮತ್ತೆ ಕೆಲವು ಪ್ರವಾಸಿಗರನ್ನು ಕೈಚಾಚಿ ಆಲಿಂಗಿಸುವಂತಿವೆ.

### ಗೋಕಾಕ-ನಯಾಗರಾ ಅವಳಿ-ಜವಳಿ

ಗೋಕಾಕ ಜಲಪಾತವನ್ನು ‘ಭಾರತದ ನಯಾಗರಾ’ ಎಂದು ಯಾರೋ ಕರೆದಿದ್ದಾರೆ. ಆದರೆ, ಇದು ಸರಿಯಾದ ಹೋಲಿಕೆ ಅಲ್ಲ. ಇವರೆಡೂ ಜಲಪಾತಗಳನ್ನು ಅವಳಿ– ಜವಳಿ ಸಹೋದರಿಯರು ಎಂದೇ ಕರೆಯಬಹುದು.

ಉತ್ತರ ಅಮೆರಿಕದಲ್ಲಿ ನಯಾಗರಾ ನದಿಯಿಂದ ಹುಟ್ಟಿಕೊಳ್ಳುವ ನಯಾಗರಾ ಜಲಪಾತ, ಘಟಪ್ರಭಾ ನದಿಯಿಂದ ಹುಟ್ಟಿಕೊಳ್ಳುವ ಗೋಕಾಕ